SHRI SHANKARA AS SEEN THROUGH THE EYES
OF THE EMINENT MEN OF THE WORLD.

COLLECTION--BY-- G.R.PATIL

## ಜಗತ್ತಿನ ಶ್ರೇಷ್ಠ ವ್ಯಕ್ತಿಗಳ ದೃಷ್ಟಿಯಲ್ಲಿ ಆಚಾರ್ಯ ಶ್ರೀ ಶಂಕರರು.

0s*0s*0s**0s*0s*0s*0s*0s*0s*0s**0s*0s*0s*0s*0s*0s*0s**0s*0s*0s*0s*0

–ಸಂಕಲನ: ಶ್ರೀ. ಜಿ.ಆರ್.ಪಾಟೀಲ

There are philosophers who fall in line with Shri Shankara, there are others who may partially disagree with him. There may be thinkers who totally disagree with Shankara. But no philosopher of India, nay the world, would venture to slight Shankara. No philosophic debate, even today, can set aside Advaita and be over. This is how he is singularly inevitable in the context of world philosophy.

Come, let us now see how the men of world rewnown extol such a great and unique son of Mother India. -------------G.R.Patil.

ಆಚಾರ್ಯಪಾದ ಶ್ರೀ ಶಂಕರರನ್ನು ಸರ್ವಾತ್ಮನಾ ಒಪ್ಪಿಕೊಂಡು ಅವರ ಹೆಜ್ಜೆಯಲ್ಲಿ ಹೆಜ್ಜೆಯಿಟ್ಟು ನಡೆದ ತತ್ತ್ವಜ್ಞಾನಿಗಳಿದ್ದಾರೆ. ಅವರ ತತ್ತ್ವಗಳನ್ನು ಭಾಗಶಃ ಒಪ್ಪಿಕೊಂಡು ಭಾಗಶಃ ಒಪ್ಪಿಕೊಳ್ಳದವರೂ ಇದ್ದಾರೆ. ಪೂರ್ಣವಾಗಿ ಒಪ್ಪಿಕೊಳ್ಳದವರೂ ಇದ್ದಾರೆ. ಆದರೆ ಭಾರತೀಯ, ಅಷ್ಟೇ ಯಾಕೆ? ಜಾಗತಿಕ–ಸ್ತರದಲ್ಲಿ ಅವರನ್ನು ಅನಾದರಿಸಿ ದೂರವಿಡುವ ಎದೆಗಾರಿಕೆ ಯಾರಿಗೂ ಇಲ್ಲ. ಇಂದಿಗೂಕೂಡ, ಅದ್ವೈತವನ್ನು ಬದಿಗಿರಿಸಿ ಯಾವದೇ ತತ್ತ್ವಶಾಸ್ತ್ರೀಯ ಶಾಸ್ತ್ರಾರ್ಥ–ಚರ್ಚೆಗಳು ಮುಕ್ತಾಯವಾಗಲಾರವು. ಪರವಾಗಲಿ, ವಿರೋಧವಾಗಲಿ, ಅದ್ವೈತದ ಪರಾಮರ್ಶೆ ನಡೆಯಲೇಬೇಕು. ಅಂದಾಗಲೇ ಅದೊಂದು ತತ್ತ್ವಶಾಸ್ತ್ರೀಯಚರ್ಚೆ ಎನ್ನಿಸಿಕೊಳ್ಳುತ್ತದೆ. ಈ ರೀತಿ ಆಚಾರ್ಯ ಶ್ರೀಶಂಕರರು ಜಾಗತಿಕ ಮಟ್ಟದಲ್ಲಿ ತತ್ತ್ವವಿಚಾರ ಸಂದರ್ಭದಲ್ಲಿ ಅತ್ಯಂತ ಅನಿವಾರ್ಯವಾದ ಏಕೈಕ ವ್ಯಕ್ತಿಯಾಗಿದ್ದಾರೆ."

ಬನ್ನಿ, ನಾವೀಗ ಇಂಥ ಭಾರತಮಾತೆಯ ಸುಪುತ್ರರನ್ನು ಜಗತ್ಪ್ರಸಿದ್ಧ ವ್ಯಕ್ತಿಗಳು ಸ್ತುತಿಸಿದ್ದು ಹೇಗೆ ಎಂಬುದನ್ನು ಅವರ ಬಾಯಿಯಿಂದಲೇ ಕೇಳೋಣ.------ಜಿ.ಆರ್.ಪಾಟೀಲ.

* * * * *

1. "Most historians are agreed that if a count were taken of the twelve greatest men who ever lived in any country in any age, Shri Adi Shankaracharya would undoubtedly be one of them. I would call him the Universal man. He deserves to be called the Universal man in more senses than one. First of all, his accomplishments were of the very highest order in a number of fields of mental and spiritual activity, each one of which would have been enough to make him immortal." --Dr. Palkhivala - A Celebrated Jurist

1 "ಒಂದು ಸ್ಥೂಲಮಾನ ಲೆಕ್ಕದಂತೆ, ಜಗತ್ತಿನ ಎಲ್ಲ ದೇಶಗಳ ಎಲ್ಲ ಕಾಲಖಂಡಗಳ ಮಹಾಪುರುಷರನ್ನು ಎಣಿಕೆಮಾಡಿದರೆ, ಆಚಾರ್ಯ ಶ್ರೀ ಶಂಕರರು, ಖಂಡಿತವಾಗಿಯೂ ಅವರಲ್ಲಿ ಮೊದಲ ಹನ್ನೆರಡು ಜನರಲ್ಲಿ ಅಗ್ರಗಣ್ಯರಾಗಿರುತ್ತಾರೆ. ಅವರು ವಿಶ್ವಮಾನವರೆಂದೇ ನನ್ನ ವಿಶ್ವಾಸ. ಒಂದಕ್ಕಿಂತ ಹೆಚ್ಚು ಅರ್ಥಗಳಲ್ಲಿ ಅವರು

ವಿಶ್ವಮಾನವರಾಗಿದ್ದರು. ಬೌದ್ಧಿಕ ಮತ್ತು ಆಧ್ಯಾತ್ಮಿಕ ಕ್ಷೇತ್ರಗಳಲ್ಲಿ ಅವರು ಗೈದ ಉಚ್ಚಾತಿಉಚ್ಚತಮ ಸಾಧನೆಗಳಲ್ಲಿ ಒಂದೊಂದೇ ಸಾಧನೆಯೂ ಅವರನ್ನು ಅಮರರನ್ನಾಗಿಸಲು ಪರ್ಯಾಪ್ತವಾಗಿದೆ."

----ಡಾ.ಎ.ಎನ್.ಪಾಲ್ಕಿವಾಲಾ..ಸುಪ್ರಸಿದ್ಧ ನ್ಯಾಯವಾದಿಗಳು-ಸಂವಿಧಾನ ತಜ್ಞರು.

* * * * *

2. Saturation of this materialism created a strong revulsion in the minds of the people." And they were waiting for a proper leader to give voice to their feelings. A little later, this public revulsion took the form of "The Spiritual Movement" and it saw its fullest expression in the personality of Shri Shankara. In this sense Shri Shankara is rightly described as the architect of this Spiritual Movement." -Dr. K.M.Munshi.

2. "ಅತಿಯಾದ ಭೌತಿಕವಾದವು ಜನರಲ್ಲಿ ಅದರ ಬಗ್ಗೆ ತಿರಸ್ಕಾರವನ್ನು ಮೂಡಿಸಿತ್ತು. ಆದರೂ ಭಾರತಾಂಬೆಯ ಸುದೈವದಿಂದ ಈ ಪರಿಸ್ಥಿತಿಯು ಶೀಘ್ರವಾಗಿ ಸುಧಾರಿಸಿತು. ಅನತಿಕಾಲದಲ್ಲಿಯೇ ಜನರ ಈ ತಿರಸ್ಕಾರವು ಒಂದು ಆಧ್ಯಾತ್ಮಿಕ-ಆಂದೋಲನವಾಗಿ ಪರಿವರ್ತಿತವಾಯಿತು. ಜನತೆಯು ತಮ್ಮ ಆಶೋತ್ತರಗಳಿಗೂ, ಭಾವನೆ ಗಳಿಗೂ ಧ್ವನಿಯನ್ನೊದಗಿಸುವ ಅಗ್ರಗಣ್ಯರಿಗಾಗಿ ಪರಿತಪಿಸುತ್ತಿತ್ತು; ಆಚಾರ್ಯ ಶಂಕರರ ಅಮೋಘ ವ್ಯಕ್ತಿತ್ವದಲ್ಲಿ ದೇಶವು ಇಂಥ ಅಗ್ರಗಣ್ಯರನ್ನು ಕಂಡಿತು. ಅಂದಿನ ಜನಾಂಗದ ಹಾರೈಕೆಯಂತೆ, ಅವರೆಲ್ಲರ ಕಣ್ಮಣಿಗಳಾದ ಶ್ರೀ ಶಂಕರರ ಮುಂದಾಳ್ತನದಲ್ಲಿ ಈ ಆಂದೋಲನವು ಪರಿಪೂರ್ಣತೆಯನ್ನು ಕಂಡಿತು. ಈ ಅರ್ಥದಲ್ಲಿ ಶ್ರೀ ಶಂಕರರು ಈ "ಆಧ್ಯಾತ್ಮಿಕ ಆಂದೋಲನದ ರೂವಾರಿ"ಗಳೆಂದೇ ಪರಿಗಣಿಸಲ್ಪಟ್ಟಿದ್ದಾರೆ. ---ಡಾ. ಕೆ. ಎಮ್. ಮುನಶಿ.-ಭಾರತೀಯ ವಿದ್ಯಾಭವನದ ಸಂಸ್ಥಾಪಕರು.

* * * * *

3. येनाधीतानि शास्त्राणि भगवत् शंकराह्वयात् ।
निःशेषसूरिमूर्धालिमालालीढांघ्रि पंकजात् ॥

"I was well educated in all the Shastras by "the venerable" Shri Shankara, whose lotus feet (the ambrosia of wisdom there-at) used to be licked by a swarm of bees in the form of the leading scholars."

Shiva Soma Sharma, a direct student of Shri Shankara, from Cambodia .....(Inscription du Cambodge edi. G.Coedes I. pp 36-46)

It undoubtedly establishes the fact that many foreign Students swarmed around Shri Shankara "The Venerable" to know and master The Advaita.

3. ಯೇನಾಧೀತಾನಿ ಶಾಸ್ತ್ರಾಣಿ ಭಗವತ್ ಶಂಕರಾಹ್ವಯಾತ್ ।
ನಿಃಶೇಷಸೂರಿಮೂರ್ಧಾಲಿಮಾಲಾಲೀಢಾಂಘ್ರಿಪಂಕಜಾತ್ ॥

ಅಪವಾದವೇ ಇಲ್ಲದಂತೆ, ಸಕಲ ವಿದ್ವಾಂಸರ ಶಿರಗಳೆಂಬ ದುಂಬಿಗಳು ಯಾರ ಪದಪಂಕಜದಿಂದ ಒಸರುವ ಬ್ರಹ್ಮಜ್ಞಾನವೆಂಬ ಮಧುವನ್ನು ನೆಕ್ಕುತ್ತವೆಯೋ ಅಂಥ ಭಗವಾನ್ ಶಂಕರರ ಅಡಿದಾವರೆಗಳಲ್ಲಿ ಕುಳಿತು ನಾನು ಸಕಲಶಾಸ್ತ್ರಗಳನ್ನು ಅಧ್ಯಯನ ಮಾಡಿದೆನು".-----ಶ್ರೀ ಶಿವಸೋಮ ಶರ್ಮಾ-ಕಾಂಬೋಡಿಯಾ ದೇಶಿಗರು.

[ಕಾಂಬೋಡಿಯಾ ದೇಶದಿಂದ ಭಾರತಕ್ಕೆ ಬಂದು ಆಚಾರ್ಯರಲ್ಲಿ ಸಾಕ್ಷಾಚ್ಛಿಷ್ಯತ್ವ ಮಾಡಿದ ಮಹಾಭಾಗ್ಯವಂತರಾದ ಶ್ರೀ ಶಿವಸೋಮ ಶರ್ಮಾ ಎಂಬ ವಿದ್ವತ್ತಲ್ಲಜರೊಬ್ಬರು "ಸಕಲ ವಿದ್ವಾಂಸರುಗಳ ಶಿರಗಳು ಶ್ರೀ ಶಂಕರರ ಪಾದಗಳಿಗೆ ಭಕ್ತಿಯಿಂದ ಮಣಿಯುತ್ತಿದ್ದವು. ಅಂಥ ವಿದ್ವದಗ್ರೇಸರರಾಗಿದ್ದರು ಆಚಾರ್ಯಪಾದ ಶ್ರೀ ಶಂಕರರು." ಎಂದು ಆಚಾರ್ಯರನ್ನು ಹೊಗಳಿದ್ದಾರೆ. ವಿವರಗಳಿಗೆ ಜಿ.ಕೋಡ್ಸ್ ಅವರು ಸಂಪಾದಿಸಿದ "ಕಾಂಬೋಡಿಯಾದ ಶಾಸನಗಳು"....ಪುಟ 36...46 ನೋಡಿ.] ಇವರು ಕಾಂಬೋಡಿಯಾದ ಚಂಪಾ ದೇಶದ ರಾಜನಾದ ದ್ವಿತೀಯ

ಜಯವರ್ಮನ (ಕ್ರಿ.ಶ. 802..869) ಮಾತುಲನ ಪೌತ್ರರೆಂದೂ, ಇಂದ್ರವರ್ಮನ ಗುರುಗಳೆಂದೂ, ಡಾ. ಬಲದೇವ ಉಪಾಧ್ಯಾಯರು ಬರೆಯುತ್ತಾರೆ.

* * * * *

4. In about a decade, Shankara came to be recognized as a living deity. His personality and the miracles with which it was associated, his invincibility in ceremonial debates, his new and synthetic philosophy, religious and moral impulses that his evangelism released, all evoked admiration and provoked responses in royal courts, seats of learning and centres of religion."

Dr.K.M. Munshi.

4. "ಕೇವಲ ಹತ್ತು-ವರ್ಷಗಳ ಅಲ್ಪಾವಧಿಯಲ್ಲಿಯೇ ಜನಸಾಮಾನ್ಯರು, "ಆಚಾರ್ಯರು ಭಗವಂತನ ಅವತಾರವೇ ಹೌದು" ಎಂಬ ಸತ್ಯವನ್ನು ಮನಗಂಡರು. ಅನಿವಾರ್ಯಪ್ರಸಂಗಗಳಲ್ಲಿ ಆಚಾರ್ಯರು ತೋರಿದ ಕೆಲವು ಪವಾಡಗಳು, ಶಾಸ್ತ್ರೀಯ ವಾಕ್ಯಾರ್ಥಗಳಲ್ಲಿ ಎಂಥೆಂಥ ಅಜೇಯ ಮಲ್ಲರೊಡನೆಯೂ ಕಾದಿ, ಸದಾಸರ್ವದಾ ಅವರು ಬಾರಿಸಿದ ಜಯಭೇರಿ, ಅವರ ಸರ್ವಸಮನ್ವಯವಾದೀ ಸಿದ್ಧಾಂತ, ಅವರ ಬೋಧನೆಗಳಿಂದ ಹೊಮ್ಮುತ್ತಿದ್ದ ನೈತಿಕ, ಧಾರ್ಮಿಕ ಅಂತಃಪ್ರವೃತ್ತಿ-ಪ್ರಚೋದನೆಗಳು, ಈ ಎಲ್ಲ ಗುಣವಿಶೇಷಗಳು ಅವರ ಬಗ್ಗೆ ಪಂಡಿತ ಪಾಮರರೆಲ್ಲರಲ್ಲಿಯೂ ಗೌರವಾದರ ಭಕ್ತಿ ಶ್ರದ್ಧೆಗಳನ್ನು ಮೂಡಿಸಿದವು. ಅವರ ಎಲ್ಲ ಕಾರ್ಯಕ್ರಮಗಳಿಗೆ ಅಂದಿನ ವಿವಿಧ ಧಾರ್ಮಿಕ ಕೇಂದ್ರಗಳಿಂದ, ಜ್ಞಾನ ದೇಗುಲಗಳಿಂದ ಹಾಗೂ ವಿಶೇಷತಃ ರಾಜಸಭೆಗಳಿಂದ ಧನಾತ್ಮಕ ಪ್ರತಿಕ್ರಿಯೆ ದೊರಕಿತು."

------ಡಾ.ಕೆ.ಎಮ್.ಮುನಶಿ.

* * * * *

5. "But a more remarkable man arose in the south destined to play a more vital part in India's life than all the kings and emperors. He seems to have been a person of amazing genius. He set about reviving Hinduism which became dominant all over the country. The whole country is stirred up intellectually by Shankara's commentaries and arguments. Not only does he become the leader of the Brahmin class, but he seems to catch the imagination of the masses". ....

Pt. Nehru in his Glimpses of World history,

5. "ಭಾರತದ ದಕ್ಷಿಣತುದಿಯಲ್ಲಿ ಅಸಾಮಾನ್ಯ ವ್ಯಕ್ತಿಯೊಬ್ಬರು ಜನಿಸಿದರು. ಭಾರತೀಯಜೀವನದಲ್ಲಿ ರಾಜಮಹಾರಾಜರು ಆಡಿದ ಪಾತ್ರಕ್ಕಿಂತ ವಿಭಿನ್ನವಾದ, ಆದರೆ ಅದಕ್ಕಿಂತಲೂ ವಿಶಿಷ್ಟವಾದ, ಚೈತನ್ಯ-ಪೂರ್ಣವಾದ ಪಾತ್ರವನ್ನು ನಿರ್ವಹಿಸಬೇಕೆಂಬ ದೈವೀಸಂಕೇತದಂತೆಯೇ ಅವರ ಜನ್ಮವಾಗಿತ್ತು. ಅವರ ಪ್ರತಿಭೆ-ಮೇಧೆಗಳು ವಿಸ್ಮಯಕಾರಿಯಾಗಿದ್ದವು. ಸನಾತನಹಿಂದೂಧರ್ಮವನ್ನು ಪುನಶ್ಚೇತನಗೊಳಿಸಲುಪಕ್ರಮಿಸಿದ ಸ್ವಲ್ಪಕಾಲದಲ್ಲಿಯೇ ಅದರಲ್ಲಿ ಪೂರ್ಣಯಶಸ್ಸು ಕಂಡರು. ಹಿಂದೂಧರ್ಮವು ನಾಡಿನ ತುಂಬೆಲ್ಲ ಮೇಲ್ಮೈಸಾಧಿಸಿ ಪ್ರಧಾನಧರ್ಮವಾಯಿತು. ಅವರ ಭಾಷ್ಯಾದಿ ಗ್ರಂಥಗಳಲ್ಲಿ ಕಾಣಬರುವ ಯುಕ್ತಿಯುಕ್ತ ವಾದವೈಖರಿಯಿಂದ ಇಡೀ ದೇಶವೇ ಬೌದ್ಧಿಕವಾಗಿ ಜಾಗೃತವಾಯಿತು. ಬುದ್ಧಿಪ್ರಧಾನವಾದ ಬ್ರಾಹ್ಮಣವರ್ಗವಷ್ಟೇ ಅಲ್ಲ, ಭಾವನಾಪ್ರಧಾನವಾದ, ಕ್ರಿಯಾಪ್ರಧಾನವಾದ, ಸಮಾಜದ ಇತರ ವರ್ಗಗಳೂ ಕೂಡ ಅವರನ್ನು ತಮ್ಮ ಗುರು-ಮಾರ್ಗದರ್ಶಕರೆಂದು ಒಪ್ಪಿಕೊಂಡರು."

---ಪಂ. ನೆಹರೂ -Glimpses of World History [ಜಗತ್ಕಥಾ ವಲ್ಲರಿ.]

* * * * *

6. Shri Shankara was basically an integrator, and a harmonizer. He is rightly reckoned as *Samanvayacharya.* (A reconciler so to say). There is no wonder if he preferred National integration to other issues........National Integration is the process of intensification of the conception of common land and common culture. How the long, troublesome and tiresome journeys were undertaken by Shri Shankara with a view to achieving religious and spiritual unification of India, throughout this vast land, at a time when travel was difficult and means of transport were very slow and primitive.------

Pandit Nehru.In his Discovery of India.

6. ಎಲ್ಲದರಲ್ಲಿಯೂ, ಎಲ್ಲರಲ್ಲಿಯೂ ಸಮರಸಭಾವವನ್ನುಂಟು ಮಾಡಬೇಕೆಂಬ ಕಡೆಗೆ, ಏಕತೆಯನ್ನು ಉಂಟು ಮಾಡಬೇಕೆಂಬ ಕಡೆಗೆ, ಆಚಾರ್ಯ ಶ್ರೀ ಶಂಕರರ ಒಲವಿತ್ತು. ಆದ್ದರಿಂದಲೇ "ಸಮನ್ವಯಾಚಾರ್ಯ" ಎಂದು ಅವರನ್ನು ಸಂಬೋಧಿಸಿದ್ದು ನ್ಯಾಯಸಮ್ಮತವಾಗಿದೆ. ಈ ಕಾರಣಕ್ಕಾಗಿಯೇ, ಇತರ ವಿಷಯಗಳಿಗಿಂತ, ಅವರು ರಾಷ್ಟ್ರೀಯಭಾವೈಕ್ಯ-ಸಾಧನೆಗೆ ಹೆಚ್ಚು ಒತ್ತುಕೊಟ್ಟರು. ರಾಷ್ಟ್ರೀಯ ಭಾವೈಕ್ಯವೆಂದರೆ, "ಒಂದೇನೆಲ ಒಂದೇ ಸಂಸ್ಕೃತಿ" ಎಂಬ ಪರಿಕಲ್ಪನೆಯನ್ನು ಗಟ್ಟಿಗೊಳಿಸುವ ಪ್ರಕ್ರಿಯೆ. ಇದನ್ನು ಸಾಧಿಸಲಿಕ್ಕಾಗಿ, ಪೀಡಾಕಾರಕ ಹಾಗೂ ಶ್ರಮಕಾರಕ ದೀರ್ಘ ಪ್ರಯಾಣಗಳನ್ನವರು ಕೈಕೊಂಡರು. ತುಂಬ ನಿಧಾನಗತಿಯ ತೀರಹಳೆಯ ಪ್ರಯಾಣ ಸಾಧನಗಳಿದ್ದಾಗಲೂ [ಅವುಗಳಿಂದಾಗುವ ಅನಾನುಕೂಲತೆ-ತೊಂದರೆಗಳನ್ನು ಲೆಕ್ಕಿಸದೆ], ಭಾರತದ ಧಾರ್ಮಿಕ / ಆಧ್ಯಾತ್ಮಿಕ-ಏಕತೆಯನ್ನು ಸಾಧಿಸಲು, ವಿಶಾಲವಾದ ಈ ದೇಶದ ಉದ್ದಗಲಕ್ಕೆ ಸಂಚರಿಸಿದರು.------ಪಂ. ನೆಹರು.

* * * * *

7. ''Western people can hardly imagine a personality like that of Shankara-Acharya. We contemplate with wonder and delight the devotion of Francis of Assissi, the intellect of Abelard, the virile force and freedom of Martin Luther and the political efficiency of Ignatius Loyola, but who could imagine all those united in one person......

Sister Nivedita. (Margaret Noble)........

7. "ಆಚಾರ್ಯ ಶಂಕರರರಂಥ ಅದ್ಭುತ ವ್ಯಕ್ತಿತ್ವವನ್ನು ಪಾಶ್ಚಾತ್ಯರು ಕಲ್ಪಿಸಿಕೊಳ್ಳಲೂ ಸಾದ್ಯವಿಲ್ಲ. 'ಫ್ರಾನ್ಸಿಸ್ ಅಸ್ಸಿಸ್ಸಿ' ಯ ಶ್ರದ್ಧೆ, ಅಬೆಲಾರ್ಡನ ಬುದ್ಧಿಮತ್ತೆ, ಮಾರ್ಟಿನ್ ಲೂಥರ್‌ನ ಪೌರುಷ ಮತ್ತು ಸ್ವಾತಂತ್ರ್ಯ ಪ್ರೇಮ, ಇಗ್ನೇಶಿಯಸ್ ಲೋಯೋಲಾನ ರಾಜಕಾರಣನೈಪುಣ್ಯ, ಇವುಗಳನ್ನು ಪಾಶ್ಚಾತ್ಯ ಜಗತ್ತು ಇಂದಿಗೂ ಅಭಿಮಾನದಿಂದ ಹಾಗೂ ಚಕಿತವಾಗಿ ನೆನೆಯುತ್ತದೆ. ಆದರೆ ಈ ಎಲ್ಲ ಸ್ಪೃಹಣೀಯ ಗುಣಗಳೂ 'ಶ್ರೀಶಂಕರಾಚಾರ್ಯ' ಎಂಬ ಒಬ್ಬರೇ ವ್ಯಕ್ತಿಯಲ್ಲಿ ಏಕೀಭವಿಸಿದ್ದವೆಂಬುದನ್ನು ಪಾಶ್ಚಾತ್ಯರು ನಂಬಲೇಆರರು."-------- ಭಗಿನಿ ನಿವೇದಿತಾ.

* * * * *

8. "Indeed Shankara has been appropriated completely by this nation. Almost all important places of pilgrimage bear his impress. The tradition and cultures of different parts of India have been unmistakably influenced by His life and teachings. His has been an all-pervading universal personality. (Sister Nivedita.)

8. "ಇಡೀ ರಾಷ್ಟ್ರಕ್ಕೆ ರಾಷ್ಟ್ರವೇ ಆಚಾರ್ಯ ಶ್ರೀಶಂಕರರನ್ನು ತನ್ನವರೆಂದು ಒಪ್ಪಿ ಅಭಿಮಾನಿಸಿತು. ದೇಶದ ಎಲ್ಲ ಯಾತ್ರಾಸ್ಥಳಗಳ ಮೇಲೂ ಅವರ ಪ್ರಭಾವವನ್ನು ನಾವಿಂದಿಗೂ ಕಾಣುತ್ತೇವೆ. ವಿಶಾಲ ಭಾರತದ ವಿವಿಧ ಭೌಗೋಲಿಕ ಭಾಗಗಳಲ್ಲಿ ಪ್ರಚಲಿತವಿರುವ ವಿವಿಧ ಸಂಪ್ರದಾಯ ಹಾಗೂ ಸಂಸ್ಕೃತಿಗಳು ಅವರ ಜೀವನ ಹಾಗೂ ಬೋಧನೆಗಳಿಂದ

ಅತ್ಯಂತ ಪ್ರಭಾವಿತವಾಗಿರುವದು ಖಚಿತವಾಗಿದೆ. ಅವರ ವ್ಯಕ್ತಿಮತ್ತೆಯು ಸರ್ವವ್ಯಾಪಿಯೂ ವಿಶ್ವಮಾನ್ಯವೂ ಆಗಿತ್ತು."---------ಭಗಿನೀನಿವೇದಿತಾ.

9. "The whole of the national genius awoke once more in Shankara-Acharya. Amongst all the brilliance and luxury of the age, in spite of the rich and florid taste of the Puranic period, his soul caught the mystic whisper of the ancient rhythm of the Vedic chants, and dynamic power of the faith to lead the soul to super-consciousness, became for him the secret of every phase of Hinduism. Shri Shankara's love of the Vedas helped him to understand unerringly the Upanishadic religion to be our national religion, and reasoning provides us the universal key to unlock its secrets."

--Sister Nivedita.

9. "ಆಚಾರ್ಯ ಶ್ರೀಶಂಕರರ ನವನವೋನ್ಮೇಷಶಾಲಿನೀ ಪ್ರತಿಭೆಯು ಭಾರತೀಯ ವಿವಿಧತೆಯಲ್ಲಿ ಏಕತೆಯನ್ನು ಕಂಡುಕೊಂಡಿತು. ಇಡೀ ರಾಷ್ಟ್ರದ ಪ್ರತಿಭೆಯೇ ಒಗ್ಗೂಡಿ ಆಚಾರ್ಯರಲ್ಲಿ ಮೈದಾಳಿತು. ತಮ್ಮ ಸುತ್ತಮುತ್ತಲೂ ಇದ್ದ, ಐಹಿಕವಿಲಾಸದ ಥಳಕು-ಬೆಳಕಿನಲ್ಲಿಯೂ, ಸಮೃದ್ಧ ಹಾಗೂ ಶೃಂಗಾರಭರಿತ ಜೀವನಶೈಲಿಯ ಮಧ್ಯದಲ್ಲಿಯೂ, ಆಚಾರ್ಯರ ಅಂತರಾತ್ಮವು, ಪ್ರಾಚೀನತಮ ವೈದಿಕಮಂತ್ರಗಳು ಮಂದ್ರಸ್ವರದಲ್ಲಿ ನುಡಿಯುತ್ತಿದ್ದ ನಿಗೂಢ ಆಧ್ಯಾತ್ಮಿಕತೆಯನ್ನು ಕೇಳಿಸಿಕೊಂಡಿತು. "ಶ್ರದ್ಧೆಯೆಂಬ ಚೈತನ್ಯಪೂರ್ಣಶಕ್ತಿಯು ಎಲ್ಲರನ್ನೂ ಪ್ರಜ್ಞಾತೀತ ಅವಸ್ಥೆಗೆ ಕರೆದೊಯ್ಯುತ್ತದೆ ಎಂಬ ನಂಬಿಕೆಯೇ ಭಾರತೀಯಜೀವನದ ರಹಸ್ಯ" ಎಂಬುದವರಿಗೆ ಮನವರಿಕೆಯಾಯಿತು. "ಔಪನಿಷದ್ಧರ್ಮವೇ ಭಾರತದ ರಾಷ್ಟ್ರಧರ್ಮ, ಈ ಧರ್ಮದ ರಹಸ್ಯಗಳನ್ನು ತಿಳಿಯಲು ತರ್ಕಬದ್ಧವಾದ ವಿಚಾರಮಾತ್ರವೇ ಸಮೀಚೀನ ಸಾಧನ" ಎಂದು ನಿರ್ದುಷ್ಟವಾಗಿ ನಿರ್ಣಯಿಸಿದರು. ಹೀಗೆ ನಿರ್ಣಯಿಸಲು ಅವರಿಗೆ ವೇದಗಳ ಬಗ್ಗೆ ಇದ್ದ ಅಪಾರ ಜ್ಞಾನ, ಪ್ರೀತಿ ಹಾಗೂ ಶ್ರದ್ಧೆಗಳೇ ಕಾರಣವಾಗಿದ್ದವು."

---ಭಗಿನೀ ನಿವೇದಿತಾ.

* * * * *

10. The Acharya was able to discover a common base and a common goal on the spiritual plane, and could build his formidable philosophy on a very strong foundation which could accommodate all differences as different stages of growth, at the same time pointing to the goal, transcending all differences.

--------Swami Amritananda.

10. ಆಚಾರ್ಯಪಾದ ಶ್ರೀ ಶಂಕರರು, ಆಧ್ಯಾತ್ಮಿಕ ಸ್ತರದಲ್ಲಿ, ಎಲ್ಲರಿಗೂ ಸಾಮಾನ್ಯವಾದ ಧ್ಯೇಯವನ್ನು ಕಂಡುಕೊಳ್ಳುವಲ್ಲಿ ಸಫಲರಾದರು. ಹಾಗೂ ಎಲ್ಲರಿಗೂ ಅನ್ವಯಿಸುವಂಥ ತತ್ತ್ವಜ್ಞಾನವನ್ನು ಗಟ್ಟಿಯಾದ ತಳಹದಿಯ ಮೇಲೆ ನಿರ್ಮಿಸಿದರು. ಸಮಾಜದಲ್ಲಿ ಕಂಡುಬರುವ ವಿಭಿನ್ನ ಸಿದ್ಧಾಂತಗಳನ್ನು ಶ್ರೇಣೀಕರಿಸಿ, ಅವೆಲ್ಲ ಆಧ್ಯಾತ್ಮಿಕ ಜೀವನದ ವಿವಿಧ ಹಂತಮಾತ್ರಗಳೆಂದು ತಿಳಿಸುತ್ತ, ಎಲ್ಲ ಸೈದ್ಧಾಂತಿಕ-ಭೇದಗಳನ್ನೂ ಮೀರಿ ಆಚೆ ಇರುವ ಏಕಮೇವ ಲಕ್ಷ್ಯವನ್ನು ವಿಧಿಸಿದರು.

-----ಸ್ವಾಮಿ ಅಮೃತಾನಂದರು.

* * * * *

11. Behold but one in all things. God within and God without. There is a way to reality in and through the world, and there is a way to reality in and through the soul. But

the best way is that which leads to the divine ground simultaneously in the perceiver and in that which is perceived."

Aldous Huxley'i his Perennial Philosophy" on "That art thou." ("तत् त्वमसि" Of the Upaniashat.)

The striking similarity of this passage to the mission of The Acharya is self-explanatory.--

11. "ನೀನೇ ಅದಾಗಿರುವೆ. [ಉಪನಿಷತ್ತಿನ ತತ್+ತ್ವಮಸಿ] ಎಲ್ಲದರಲ್ಲಿ ಭಗವಂತನನ್ನೇ ಕಾಣು. ಒಳಗೂ ಹೊರಗೂ ಅದೇ ದೇವನನ್ನೇ ಕಾಣು. [ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣಃ ಸ್ಥಿತಃ] ಜಗತ್ತಿನ ಮೂಲಕವೂ ಸತ್ಯವನ್ನು ಅರಸಬಹುದು. ['ಸರ್ವಂ ಖಲ್ವಿದಂ ಬ್ರಹ್ಮ' ಎಂಬಂತೆ], ಜೀವದ ಮೂಲಕವೂ ಸತ್ಯವನ್ನು ಅರಸಬಹುದು, [ಅಹಂ ಬ್ರಹ್ಮಾಸ್ಮಿ ಎಂಬಂತೆ], ಆದರೆ ಸತ್ಯವನ್ನರಸುವ ವ್ಯಕ್ತಿ ಹಾಗೂ ಅರಸಲ್ಪಡುವ ಆ ಸತ್ಯವಸ್ತು ಎರಡೂ ಒಂದೇ ಆಗಿವೆ ಎಂಬ ವಿಚಾರದಮೂಲಕ [ತತ್ ತ್ವಮಸಿ ಎಂಬಂತೆ], ಆತ್ಮಸಾಕ್ಷಾತ್ಕಾರ ಮಾಡಿಕೊಳ್ಳುವದು ಅತ್ಯಂತ ಸಮೀಚೀನ ವಾಗಿದೆ."---ಅಲ್ಡಸ್ ಹಕ್ಸಲೀ ಎಂಬ ವಿಜ್ಞಾನಿಯು ಬರೆದ "ಚಿರಂತನ ತತ್ತ್ವಜ್ಞಾನ" [Perennial Philosophy] ಎಂಬ ಪುಸ್ತಕದಲ್ಲಿ ಈ ವಾಕ್ಯಪುಂಜವು ದೊರಕುತ್ತದೆ. ಈ ವಾಕ್ಯಪುಂಜವು ಆಚಾರ್ಯರ ಸಿದ್ಧಾಂತದೊಡನೆ ಅತ್ಯಂತ ನಿಕಟಹೋಲಿಕೆಯನ್ನು ಹೊಂದಿದೆ. (ಆಚಾರ್ಯರ ಸಿದ್ಧಾಂತದ ಆಂಗ್ಲಾನುವಾದವೇ ಆಗಿದೆ) ಎಂಬುದನ್ನು ಬೇರೆ ಹೇಳಬೇಕೇ?

* * * * *

12. "Space, time, motion, even the mass of objects, all that we are wont to take as absolute in our everyday life, are not absolute. Things are not what they seem. Nothing in the visible, sensible, thinkable world has absolute reality. This is what science tells us today and this is what precisely Shankara meant to convey when he said that our visible world is *vyavaharika satta* and not *paramartthika satta.-*

-Dr.Rajaramanna in his " Physics of life and Death".

12. ನಮ್ಮ ನಿತ್ಯಜೀವನದಲ್ಲಿ ನಾವನುಭವಿಸುವ, ಸ್ಥಳ [ಅವಕಾಶ], ಕಾಲ, ಚಲನ, ವಸ್ತುಗಳ ದ್ರವ್ಯರಾಶಿ ಇವೆಲ್ಲವೂ ನಿರಪೇಕ್ಷ ಸತ್ಯವೆಂದು ನಾವು ತಿಳಿದಿದ್ದೇವೆ. ಆದರೆ ವಸ್ತುಗಳು ಅವು ಕಾಣುವಂತೆ ಇರುವದಿಲ್ಲ. ದೃಶ್ಯ, ಶ್ರಾವ್ಯ ಅಥವಾ ವೈಚಾರಿಕ ಜಗತ್ತಿನಲ್ಲಿ ಯಾವುದಕ್ಕೂ ನಿರಪೇಕ್ಷ ಸತ್ಯತ್ವವಿಲ್ಲ. ವಿಜ್ಞಾನವು ಇಂದು ಇದೇ ಸಿದ್ಧಾಂತವನ್ನೇ ಪ್ರತಿಪಾದಿ ಸುತ್ತಿದೆ. ಕಣ್ಣಿಗೆಕಾಣುವ ಜಗತ್ತು ಪಾರಮಾರ್ಥಿಕ ಸತ್ಯವಲ್ಲ; ಕೇವಲ ವ್ಯಾವಹಾರಿಕ ಸತ್ಯವಾಗಿದೆ, ಎಂದು ಸಿದ್ಧಾಂತಿಸುತ್ತ, ಶ್ರೀ ಶಂಕರರು ತಿಳಿಯಪಡಿಸಿದ ಇದೇ ಮಾತನ್ನೇ, ಇಂದು ವಿಜ್ಞಾನವು ಒಪ್ಪಿಕೊಂಡು ಪ್ರತಿಪಾದಿಸುತ್ತಿದೆ.

---ಡಾ. ರಾಜಾರಾಮಣ್ಣ. "Physics of life and Death".ಎಂಬ ತಮ್ಮ ಲೇಖನದಲ್ಲಿ.

* * * * *

13. "Shankara's Adviata is no creed. It is not in conflict with any other system. It recognises the measure of worth in each system. The existence of the spirit is absolute and its creedal manifestations are relative. So there is no need to wrangle about them. Hence we look upon all creeds as fellowship of faiths......At a time in our homeland when false doctrines were misguiding men, the heterodoxy of the age either refuted the authority of the Vedas or misinterpreted its message in terms of barren and dead rituals, it was Shankara who recaptured the Vedas. Shankara was the hero who restored the

Upanishadic philosophy into its great place. Shankara's loyalty to Vedas and his philosophic genius enabled to leave for posterity a philosophy that has no conflict with any other system.In his characteristic lucid and majestic prose, he not only established the non-duality of Brahman (Brahmadvaita) but also the non-difference between different faiths...Darshanadvaita."

.........Dr. P.Nagaraj Rao..Introduction to Vedanta.

13. "ಶ್ರೀ ಶಂಕರರ ಅದ್ವೈತವು ಒಂದು ಮತಧರ್ಮವಲ್ಲ. ಅದು ಬೇರಾವ ಮತಗಳೊಂದಿಗೂ ಘರ್ಷಣೆಗೆ ನಿಲ್ಲುವದಿಲ್ಲ. ಅದು ಪ್ರತಿಯೊಂದು ಮತದಬೆಲೆಯನ್ನು ನಿರ್ಧರಿಸುತ್ತದೆ. ಸಕಲಮತಾತೀತವಾದ ಚೈತನ್ಯದ ಅಸ್ತಿತ್ವವು ಇತರ ನಿರಪೇಕ್ಷ ವಾಗಿದೆ. ಆದರೆ ಮತೀಯ ಅಭಿವ್ಯಕ್ತಿ ಮಾತ್ರ ಸಾಪೇಕ್ಷವಾಗಿದೆ. ಆದ್ದರಿಂದ [ಮತಾತೀತ ತತ್ತ್ವಾನುಯಾಯಿಗಳಾದ] ಅದ್ವೈತಿಗಳು ಇತರಮತಗಳೊಂದಿಗೆ ಜಗಳಾಡುವ ಅವಶ್ಯಕತೆಯೇ ಇಲ್ಲ. ಆದ್ದರಿಂದ ಅದ್ವೈತಿಗಳು ಎಲ್ಲ ಮತಗಳನ್ನೂ ಸೋದರಭಾವದಿಂದಲೇ ಕಾಣುತ್ತಾರೆ. ಶ್ರೀ ಶಂಕರರ ವೇದನಿಷ್ಠೆ, ಅಸಾಧಾರಣ ಆಧ್ಯಾತ್ಮಿಕ ಪ್ರತಿಭೆಗಳು, ಯಾವ ಮತದೊಂದಿಗೂ ಘರ್ಷಣೆಗಿಳಿಯದ ವಾದವಿದೂರವಾದ ತತ್ತ್ವಜ್ಞಾನವನ್ನು ಭವಿಷ್ಯಜ್ಜನಾಂಗಕ್ಕೆ ಕೊಡಲು ಅವರಿಗೆ ಶಕ್ತಿ-ಸಾಮರ್ಥ್ಯಗಳನ್ನೊದಗಿಸಿದವು. ತಮ್ಮ ಅತ್ಯಂತ ತಿಳಿಯಾದ "ಪ್ರಸನ್ನ ಗಂಭೀರ" ಗದ್ಯಶೈಲಿಯಿಂದ ಅವರು ಬ್ರಹ್ಮಾದ್ವೈತ ವನ್ನಷ್ಟೇ ಅಲ್ಲ, ದರ್ಶನಾದ್ವೈತವನ್ನೂ ಸ್ಥಾಪಿಸಿದರು."

----ಡಾ. ಪಿ. ನಾಗರಾಜರಾಯರು (ವೇದಾಂತ ಶಾಸ್ತ್ರದ ಮುನ್ನುಡಿ ಎಂಬ ಗ್ರಂಥದಲ್ಲಿ)

* * * * *

14. It is impossible to read Shankara's writings, packed as they are with serious and subtle thinking, without being conscious, that one is in contact with a mind of a very fine penetration and profound spirituality..... His philosophy stands forth complete, needing neither a before nor an after.....whether we agree or differ, the penetrating light of his mind never leaves us where we were....'' ---Dr. Radhakrishnan.

14. "ಗಂಭೀರವಾದ ಮತ್ತು ಸೂಕ್ಷ್ಮಚಿಂತನೆಯಿಂದ ತುಂಬಿದ ಶಂಕರರ ಬರಹಗಳನ್ನು ಓದುವಾಗ, ಬಹಳ ತೀಕ್ಷ್ಣ ದೃಷ್ಟಿಯ ಹಾಗೂ ಆಳವಾದ ಆಧ್ಯಾತ್ಮಿಕತೆಯಿಂದ ಕೂಡಿದ ಚೇತನವೊಂದರ ಜೊತೆಗೆ ಸಂಪರ್ಕ ಹೊಂದಿರುವ ಅರಿವಾಗದಿರಲು ಸಾಧ್ಯವಿಲ್ಲ.....ಅವರ ಸಿದ್ಧಾಂತವು ಸರ್ವಾಂಗ-ಪೂರ್ಣವಾಗಿ ಕಣ್ಮುಂದೆ ನಿಲ್ಲುತ್ತದೆ. ಅದಕ್ಕೆ ಪೂರ್ವ ಭೂಮಿಕೆಯಾಗಲಿ, ಪರಿಶಿಷ್ಟವಾಗಲಿ ಬೇಕಾಗಿಲ್ಲ. ನಾವು ಒಪ್ಪಲಿ, ಬಿಡಲಿ, ಅವರ ಬುದ್ಧಿಯ ತೀಕ್ಷ್ಣಪ್ರಕಾಶವು ನಮ್ಮನ್ನು ನಾವು ಹಿಂದಿದ್ದ ಜಾಗದಲ್ಲಿಯೇ ಉಳಿದಿರಲು ಬಿಡುವುದಿಲ್ಲ."

------ಡಾ. ರಾಧಾಕೃಷ್ಣನ್.

* * * * *

15. Advaita Vedanta provides a complete philosophical and conceptual framework, within which, the findings of modern physical sciences can be placed without stress of tear. Monism seemed unattractive as long as scientists had to believe in the separate nature of matter and energy. But now that matter and energy have been proved to be equivalent aspects of one underlying something, the appeal of Monism has been far greater, if not indeed irresistible. Shankara's is assuredly worth studying; the appeal of which became far greater with Einstein's discovery that matter and energy are inter-

changable.....We must realise that Shankara must forever be numbered among he wisest sons, not of Mother India alone, but of all mankind.'' .....Arthur Eisenberg...A Scientist.

15. ಶ್ರೀ ಶಂಕರರ ಅದ್ವೈತವು ವಿಜ್ಞಾನಿಗಳಿಗೆ [ಜಗತ್ತನ್ನು ಕುರಿತ] ತಾತ್ತ್ವಕ ಮತ್ತು ಪರಿಕಲ್ಪನಾತ್ಮಕ ಅಸ್ತಿವಾರವನ್ನೂ, ಕಾರ್ಯಕ್ಷಮವಾದ ಚೌಕಟ್ಟನ್ನೂ ಒದಗಿಸುತ್ತದೆ. ಈ ಚೌಕಟ್ಟಿನಲ್ಲಿ ಆಧುನಿಕವಿಜ್ಞಾನದ ಉನ್ನತ ಸಂಶೋಧನಾ ಫಲಿತಗಳನ್ನು ಯಾವದೇ ಕಷ್ಟಗಳಿಲ್ಲದೆ ಸುಲಭವಾಗಿ ಹೊಂದಾಣಿಕೆ ಮಾಡಬಹುದು. ಜಡಪ್ರಕೃತಿ ಮತ್ತು ನೈಸರ್ಗಿಕ ಶಕ್ತಿಗಳು ಬೇರೆಬೇರೆ ಎಂದು ನಂಬಿದಷ್ಟು ಕಾಲವೂ ವಿಜ್ಞಾನಿಗಳಿಗೆ ಅದ್ವೈತವು ಅಷ್ಟು ಆಕರ್ಷಣೀಯವಾಗಿ ತೋರಲಿಲ್ಲ. ಆದರೆ ಜಡಪ್ರಕೃತಿ ಮತ್ತು ನೈಸರ್ಗಿಕ ಶಕ್ತಿಗಳು ಯಾವದೋ ಒಂದು ಮೂಲ ತತ್ತ್ವದ ಎರಡು ಮುಖಗಳೆಂದು ಸಿದ್ಧಾಂತವಾಗಿರುವ ಈ ಕಾಲದಲ್ಲಿ ಅದ್ವೈತ ತತ್ತ್ವದ ಮನೋಜ್ಞತೆಯು ಬಹಳ ಮಟ್ಟಿಗೆ ಹೆಚ್ಚಿದೆ, ಅಥವಾ ಅದರ ಪ್ರಭಾವವು ಅಪ್ರತಿಹತವಾಗಿದೆ. (ಆದ್ದರಿಂದ) ಶ್ರೀ ಶಂಕರರ ಅದ್ವೈತವು ಅತ್ಯಂತ ಅಭ್ಯಾಸ ಯೋಗ್ಯವಾಗಿದೆ. "ಭೌತವಸ್ತುಗಳು ಮತ್ತು ಶಕ್ತಿ ಇವು ಪರಸ್ಪರ ವಿನಿಮಯಕ್ಷಮವಾಗಿವೆ" ಎಂಬ, ಶ್ರೇಷ್ಠವಿಜ್ಞಾನಿ ಐನ್‌ಸ್ಟೀನ್‌ರವರ ಸಿದ್ಧಾಂತವು ಜಗಜ್ಜಾಹೀರಾದ ಮೇಲಂತೂ, ಆಚಾರ್ಯರ ಅದ್ವೈತ ತತ್ತ್ವಜ್ಞಾನದ ಸ್ವೀಕಾರಾರ್ಹತೆಯು ಇನ್ನೂ ಪ್ರವರ್ಧಿಸಿದೆ. ಭಾರತಾಂಬೆಯ, ಅಷ್ಟೇ ಯಾಕೆ? ಇಡೀ ವಿಶ್ವದ, ಪ್ರಜ್ಞಾವಂತ-ವರಪುತ್ರರಲ್ಲಿ ಆಚಾರ್ಯರು ಅಗ್ರಗಣ್ಯ ಸ್ಥಾನದಲ್ಲಿ ಪರಿಗಣಿಸಲ್ಪಡುತ್ತಾರೆ ಎಂಬುದನ್ನು ನಾವು ಸದಾ ನೆನಪಿಡಬೇಕು.'

--ಆರ್ಥರ್ ಐಸೆನ್‌ಬರ್ಗ ಶ್ರೇಷ್ಠ ಜಗತ್ಪ್ರಸಿದ್ಧ ವಿಜ್ಞಾನಿ.

* * * * *

16. ''Svami Shankaracharya was the great religious teacher and reformer who took the world by storm with his dynamic personality, subduing all oppositions and difficulties. He covered the entire country from south to north and gave the ancient religion of the land founded by Rishis, a new lease of life undertaking his self-imposed mission of resuccitating the Vedic Dharma.''

--Dr. Rajendra Prasad.

16. "ಸ್ವಾಮೀ ಶಂಕರಾಚಾರ್ಯರು ಮಹಾನ್ ಧಾರ್ಮಿಕ ಸುಧಾರಕರೂ, ಗುರುವರ್ಯರೂ ಆಗಿದ್ದರು. ಸನಾತನ ಧರ್ಮವನ್ನು ಪುನರುತ್ಥಾನಗೊಳಿಸುವ ಮಹೋದ್ಯೋಗದಲ್ಲಿ ತಮಗೆದುರಾಗಿ ಬಂದ ತೊಂದರೆಗಳನ್ನೆಲ್ಲ ತಮ್ಮ ಚೈತನ್ಯ ಪೂರ್ಣ ವ್ಯಕ್ತಿತ್ವದಿಂದ ನಿವಾರಿಸಿಕೊಂಡು, ವಿರೋಧಗಳನ್ನು ಪರಿಹರಿಸಿಕೊಂಡು, ಇಡೀ ದೇಶದಲ್ಲಿಯ ಆಧ್ಯಾತ್ಮಿಕ, ಧಾರ್ಮಿಕ ಹಾಗೂ ವೈಚಾರಿಕ ಕೊಳೆಗಳನ್ನೆಲ್ಲ ಕಿತ್ತೆಸೆಯುತ್ತ, ದಕ್ಷಿಣದಿಂದ ಉತ್ತರಕ್ಕೆ ಇಡೀ ದೇಶವನ್ನೆಲ್ಲ ಬಿರುಗಾಳಿಯಂತೆ ಸುತ್ತಿದರು. ಋಷಿಪ್ರಣೀತವಾದ ಸನಾತನಧರ್ಮಕ್ಕೆ ಹೊಸಚೈತನ್ಯವನ್ನು ತುಂಬಿದರು. ವೈದಿಕ ಧರ್ಮವನ್ನು ಪುನರುಜ್ಜೀವನಗೊಳಿಸುವ ಅತಿ-ಕ್ಲೇಶಕರವಾದ ಹೊಣೆಯನ್ನು ಸ್ವಯಂಸಂತೋಷದಿಂದ ತಮ್ಮ ಮೇಲೆ ಹೊತ್ತುಕೊಂಡು, ಅದರಲ್ಲಿ ಯಶಸ್ವಿಗಳಾದರು."

---ಡಾ.ರಾಜೇಂದ್ರ ಪ್ರಸಾದ ಅವರು-ಭಾರತದ ಪ್ರಾಕ್ತನ ಮಾನ್ಯ ರಾಷ್ಟ್ರಪತಿಗಳು.

* * * * *

17. ''In his short life of thirty two years, Shankara achieved that union of sage and saint, of wisdom and kindness, which characterises the loftiest type of man produced in India..

............ Will Durant.

17. "ಜ್ಞಾನಿಯಾಗಿ, ದೈವಭಕ್ತರಾಗಿ, ವಿವೇಕ-ಭೂತದಯೆಗಳ ಸಂಗಮವಾಗಿ, ಶಂಕರರು ತಮ್ಮ ಮೂವತ್ತೆರಡು ವರ್ಷಗಳ ಅಲ್ಪಾಯುಷೀ ಜೀವನದಲ್ಲಿ ಭಾರತದ ಅತ್ಯುದಾತ್ತ ಮಾನವ ವ್ಯಕ್ತಿತ್ವದ ಪ್ರತೀಕವಾಗಿ ರಾರಾಜಿಸಿದರು."---

ವಿಲ್ ಡ್ಯುರಾಂಟ್. ಫೆಂಚ್ ತತ್ತ್ವಜ್ಞಾನಿ.

* * * * *

18. What shall we say then of Master Shankara ? Is he not the guardian of the sacred waters, who by his commentaries has hemmed about, against all impurities of time's jealousy, first the mountain tarns of the Upanishads, then the serene forest lake of the BhagavadGita, and last deep reservoir of the Sutras, adding from the generous riches of his wisdom, lively fountains and lake-lets of his own, the crest jewel the awakening and discernment ! .

..... Charles Johnston..

18. "ಆಚಾರ್ಯ-ಪ್ರಭು ಶ್ರೀ ಶಂಕರರ ಬಗೆಗೆ ನಾವು ಏನು ಹೇಳಲು ಶಕ್ತರಾದೇವು? ಉಪನಿಷತ್ತುಗಳೆಂಬ ಗಿರಿ-ನಿರ್ಝರಗಳಿಗೆ, ಭಗವದ್ಗೀತೆಯೆಂಬ ಸುಪ್ರಶಾಂತವಾದ ಸರೋವರಕ್ಕೆ, ಗಂಭೀರಸಾಗರದಂತಿರುವ ಬ್ರಹ್ಮಸೂತ್ರಗಳಿಗೆ, ಕಾಲದ ಮಾತ್ಸರ್ಯದ ಫಲವಾಗಿ ಒದಗಿದ ಕೊಳೆಯನ್ನು ಕಿತ್ತೆಸೆದು, ತಮ್ಮ ಭಾಷ್ಯಗಳೆಂಬ ಸಂಪತ್ತಿನ ಮೂಲಕ ಅವುಗಳನ್ನು ಕಾಪಾಡಿದರು. ಅಷ್ಟಕ್ಕೇ ನಿಲ್ಲದೆ, ತಮ್ಮ ನವಚೈತನ್ಯಪ್ರದಕೃತಿಗಳಾದ ವಿವೇಕ ಚೂಡಾಮಣಿ, ಆತ್ಮಬೋಧ ಇತ್ಯಾದಿ ಜ್ಞಾನದ ಚಿಲುಮೆಗಳನ್ನು ಸನಾತನ ಧರ್ಮದ ಈ ಪವಿತ್ರತೀರ್ಥಗಳಿಗೆ ಸೇರಿಸಿ ರಕ್ಷಿಸಿದ ಮಹಾತ್ಮರಲ್ಲವೇ ಅವರು?"

---------ಚಾರ್ಲಸ್ ಜಾನ್‌ಸ್ಟನ್.

* * * * *

19. "The system of Vedanta as founded on the Upanishads and Vedanta Sutras and accompanied by Shankara's commentaries on them—equal in rank to Plato and Kant— is one of the most valuable products of the genius of mankind in the researches of the eternal truth and philosophical conceptions, unequalled in India or perhaps anywhere in the world. Eternal philosophic truth has seldom found more decisive and striking expression than in the doctrine of the emancipating knowledge of Atma.......... But Shankara in his conclusions goes perhaps more fully than any one of them"

.......Paul Deusseun....

19. "ಉಪನಿಷತ್ತುಗಳ, ವೇದಾಂತಸೂತ್ರಗಳ ಆಧಾರದಿಂದ, ಅವುಗಳ ಮೇಲಿರುವ ಶ್ರೀ ಶಾಂಕರಭಾಷ್ಯಗಳಿಂದ, ಸಿದ್ಧವಾದ ವೇದಾಂತ ದರ್ಶನವು ತನ್ನ ಮಹತಿಯಲ್ಲಿ ಪ್ಲೇಟೋ ಮತ್ತು ಕ್ಯಾಂಟ ಇವರ ಸಿದ್ಧಾಂತಕ್ಕೆ ಸಮನಾಗಿದೆ. ಈ (ವೇದಾಂತ) ದರ್ಶನವು ಶಾಶ್ವತ ಸತ್ಯಶೋಧನೆಗಾಗಿ ಮಾನವ ಕುಲವು ನಡೆಸಿದ ಪ್ರಯತ್ನಗಳಲ್ಲಿ, ತೀವ್ರಪ್ರಜ್ಞೆಯಿಂದ ಸಿದ್ಧವಾದ ಬಹುಮೂಲ್ಯ ವಸ್ತುವಾಗಿದೆ. ಶ್ರೀ ಶಂಕರರ ಸಿದ್ಧಾಂತವು ಪ್ಲೇಟೋ ಮತ್ತು ಕ್ಯಾಂಟ ಇವರೀರ್ವರ ಸಿದ್ಧಾಂತಕ್ಕಿಂತ ಅಧಿಕವಾದ ಪರಿಪೂರ್ಣತೆಯನ್ನು ಹೊಂದಿದೆ."

----.ಪಾಲ್ ಡಾಯ್ಸನ್.

* * * * *

20. Supreme as a philosopher and a dialectician, great as a man of calm judgement and wide toleration, Shankara taught us to love truth, respect reason and realise the

purpose of life. Twelve centuries have passed and yet his influence is visible. He destroyed many an old dogma, not by violently attacking it, but by quietly suggesting something more reasonable, which was at the same time more spiritual too. He put into general circulation, a vast body of spiritual knowledge and formative ideas, which, contained in the Upanishads, were forgotten by the people, and thus created for us the distant past. He was not a dreaming idealist, but a practical visionary, a philosopher, and at the same time a man of action, what we may call a socialist idealist on a grand scale. Even those who do not agree with his general attitude to life will not be reluctant to allow him a place among the immortals.

----Dr. Radhakrishan..

20. ಶ್ರೀ ಶಂಕರಾಚಾರ್ಯರು ಅಪ್ರತಿಮ-ತತ್ತ್ವಶಾಸ್ತ್ರಜ್ಞರೂ, ಅತ್ಯಂತ ಕುಶಲ-ಶಾಸ್ತ್ರಾರ್ಥಕೋವಿದರೂ, ಪರಮತ ಗಳ ಬಗ್ಗೆ ವಿಶೇಷಸ್ಫೈರಣೆಯುಳ್ಳ ವಿವೇಚನಾ ಚತುರರೂ, ಶಾಂತಮನಸ್ಕ ತೀರ್ಪುಗಾರರೂ, ಆಗಿದ್ದರು. ಯಾವಾಗಲೂ ಸತ್ಯವನ್ನೇ ಪ್ರೀತಿಸಬೇಕೆಂಬುದನ್ನೂ, ನ್ಯಾಯೋಪಬೃಂಹಿತವಾದ ತರ್ಕವನ್ನು ಗೌರವಿಸಬೇಕೆಂಬುದನ್ನೂ, ಜೀವನದ ಪರಮೋದ್ದೇಶವನ್ನು ಅರಿಯಬೇಕೆಂಬುದನ್ನೂ ನಮಗೆಲ್ಲ ತಿಳಿಸಿಕೊಟ್ಟರು. ಅವರು ಅದೃಶ್ಯರಾಗಿ ಹನ್ನೆರಡು ಶತಮಾನ ಗಳೇ ಸಂದರೂ, ಅವರ ಪ್ರಭಾವವಿನ್ನೂ ಅಚ್ಚಳಿಯದೇ ಉಳಿದಿದೆ. ಅಂದಿನ ಅನೇಕ ಜನ ವಿದ್ವಾಂಸರು ಕೆಲಕೆಲವು ತತ್ತ್ವಗಳ ಬಗ್ಗೆ ಹಟಮಾರಿತನವನ್ನು ಹೊಂದಿದ್ದರು. ಅಂಥ ವಿದ್ವಾಂಸರನ್ನು ಆಕ್ರಮಣಕಾರೀ ತರ್ಕಗಳಿಂದ ಖಂಡಿಸದೆ, ಆ ತತ್ತ್ವಗಳಿಗಿಂತಲೂ ಹೆಚ್ಚು ನ್ಯಾಯಸಂಗತವಾದ, ಹೆಚ್ಚು ಯುಕ್ತಿಯುಕ್ತವಾದ, ಗಾಢತರವಾದ ಆಧ್ಯಾತ್ಮಿಕ ಮೌಲ್ಯಗಳನ್ನೊಳಗೊಂಡ ತತ್ತ್ವಗಳನ್ನು ಶಾಂತರೀತಿಯಿಂದ ತಿಳಿಸುವ ಮೂಲಕ ಅವರ ಹಟಮಾರಿತನವನ್ನು ಆಚಾರ್ಯ ಶಂಕರರು ಅಳಿಸಿಹಾಕಿದರು. ಅನಾದಿ ಕಾಲದಿಂದಲೂ ಉಪನಿಷತ್ಪ್ರತಿಪಾದ್ಯವಾದ, ಅದರೆ ತಮ್ಮ ಕಾಲಕ್ಕೆ ಮರೆತುಹೋದಂತಿದ್ದ, ಅಗಾಧ ವಿಸ್ತಾರವುಳ್ಳ ಆಧ್ಯಾತ್ಮಿಕ ಸಾಹಿತ್ಯವನ್ನೂ, ಅನೇಕ ರಚನಾತ್ಮಕ ಪರಿಕಲ್ಪನೆಗಳನ್ನೂ ಜಗತ್ತಿನೆದುರು ಪುನರ್ಮಂಡಿಸಿ, ಇತಿಹಾಸವನ್ನು ಪುನಃಸೃಷ್ಟಿಸಿದರು. ಶ್ರೀ ಶಂಕರರು ಕೇವಲ ಹುಸಿಕನಸುಗಳಲ್ಲಿ ವಿಹರಿಸುವ ಆದರ್ಶವಾದಿಗಳಾಗಿರಲಿಲ್ಲ. ಅದ್ಭುತ ಕನಸುಗಳನ್ನು ಕಣಸಿಸುವ ಹಾಗೂ ಅವುಗಳನ್ನು ವ್ಯಾವಹಾರಿಕವಾಗಿ ಸತ್ಯಾಪಿಸುವ ಕಾರ್ಯಕ್ಷಮ ತತ್ತ್ವವೇತ್ತರೂ ಆಗಿದ್ದರು. ಅವರು ಸಮಾಜಮುಖೀ-ಉದಾತ್ತ ಭೂಮಾದರ್ಶ ವಾದಿಗಳಾಗಿದ್ದರು ಎನ್ನಬಹುದು. ಅವರ ಜೀವನ-ದರ್ಶನವನ್ನು ಒಪ್ಪಿಕೊಳ್ಳದವರು ಕೂಡ, ಅವರಿಗೆ ಅಮರತೆಯ ಪಟ್ಟಗಟ್ಟಲು ಹಿಂಜರಿಯಲಾರರು.

--------ಡಾ.ಎಸ್.ರಾಧಾಕೃಷ್ಣನ್.

21. Shankara [A.D.788-820.A.D.] was a man of amazing energy and vast activity. He was no escapist, retiring into his shell or into a corner of the forest seeking his own individual perfection and oblivious of what happened to others. Born in Malbar in the far south of India, he travelled incessantly all over India, meeting innumerable people; arguing, debating, reasoning, convincing and filling them with a part of his own passion and tremendous vitality, ......and he was infused by the same spirit though this might take many external forms. He strove hard to synthesize the diverse currents that were troubling the mind of India of his day and to build a unity of outlook out of that diversity.

All this was so and Shankara was doubtless fully aware of it. It would seem that Shankara wanted to add to this sense of national unity and common consciousness. He functioned on the intellectual, philosophical and religious plane and tried to bring about a

greater unity of thought all over the country. He functioned also on the popular plane in many ways, destroying a many a dogma and opening the doors of his philosophic sanctuary to every one, who was capable of entering it.

In a brief life of thirty two years, he did the work of many long lives and left such an impress of his powerful mind and rich personality on India that it is very evident today.''

Pt. Jawaharlal Nehru..

21. ಆಚಾರ್ಯ ಶ್ರೀಶಂಕರರ ವ್ಯಕ್ತಿಮತ್ತೆಯು ವಿಸ್ಮಯಾವಹ ಚೈತನ್ಯ ಹಾಗೂ ಅಗಾಧ ಕ್ರತುಶಕ್ತಿಗಳ ಸುಂದರ ಸಮನ್ವಯವಾಗಿತ್ತು. ಅವರು ಪಲಾಯನವಾದಿಗಳಾಗಿರಲಿಲ್ಲ. "ಪರರಿಗೇನಾದರೆ ನನಗೇನು? ನನಗೊಬ್ಬನಿಗೆ ಆಧ್ಯಾತ್ಮಿಕ ಸಿದ್ಧಿಯಾದರೆ ಸಾಕು" ಎಂದು, ಯಾವದೋ ಮೂಲೆಯಲ್ಲಿಯ ಗೂಡನ್ನೋ, ದಟ್ಟವಾದ ಕಾಡನ್ನೋ ಸೇರಿಕೊಳ್ಳುವ ಜಾಯಮಾನದವರಲ್ಲ ಆಚಾರ್ಯ ಶ್ರೀ ಶಂಕರರು. ದಕ್ಷಿಣಭಾರತದ ತುತ್ತತುದಿಯ ಮಲಬಾರಿನಲ್ಲಿ ಜನಿಸಿ, ಅವರು ದೇಶಾದ್ಯಂತ ಅವಿರತವಾಗಿ ಸಂಚರಿಸಿದರು. ಅಸಂಖ್ಯಾತ ಜನರನ್ನು ಸಂಧಿಸಿದರು. ಅವರೊಡನೆ ವಾದಿಸಿದರು, ಚರ್ಚಿಸಿದರು, ವಿಚಾರವಿನಿಮಯ ನಡೆಸಿದರು. ಅವರ ಮನವೊಲಿಸಿದರು. ಕೊನೆಗೆ ತಮ್ಮ ಅದಮ್ಯ ಚೈತನ್ಯಶಕ್ತಿಯನ್ನು ಮತ್ತು ತಮ್ಮಲ್ಲಿದ್ದ ದೇಶಪ್ರೇಮ ರಾಷ್ಟ್ರೀಯ-ಐಕ್ಯ ಇತ್ಯಾದಿ ಉದಾತ್ತ ಭಾವನೆಗಳನ್ನು ಅವರಲ್ಲಿ ತುಂಬಿದರು. ........ಸಾಂಸ್ಕೃತಿಕವಾಗಿ ಈ ದೇಶವು ಅಖಂಡವಾಗಿದೆಯೆಂದೂ, ಹೊರನೋಟಕ್ಕೆ ಇಲ್ಲಿ ವಿವಿಧತೆ ಕಂಡುಬಂದರೂ ಕೂಡ, ಇಡೀ ದೇಶದಲ್ಲಿ ಒಂದೇ ಚೈತನ್ಯವು ಅನುಸ್ಯೂತವಾಗಿದೆಯೆಂಬುದನ್ನು ಅವರು ಕಂಡುಕೊಂಡಿದ್ದರು.....ತಮ್ಮ ಕಾಲದ ಭಾರತವನ್ನು ಗೋಳುಗುಟ್ಟಿಸುತ್ತಿದ್ದ ವಿಮುಖ ಸೆಳೆತಗಳನ್ನು ಒಮ್ಮುಖಗೊಳಿಸಿ, ದೇಶದ ವಿವಿಧತೆಯಲ್ಲಿ ಏಕತೆಯನ್ನು ತರಲು ತುಂಬ ಕಷ್ಟಪಟ್ಟು ಕೆಲಸಮಾಡಿದರು.

"ಸಮಕಾಲೀನ ಜನಮಾನಸದಲ್ಲಿ ರಾಷ್ಟ್ರೀಯ ಏಕತಾಭಾವವನ್ನೂ ಸಾಮೂಹಿಕಪ್ರಜ್ಞೆಯನ್ನೂ ಬೆಳೆಸುವದು ಅವರ ಉತ್ಕಟ-ಅಪೇಕ್ಷೆಯಾಗಿತ್ತು. ಬೌದ್ಧಿಕ, ಧಾರ್ಮಿಕ, ತತ್ತ್ವಶಾಸ್ತ್ರೀಯ ಕ್ಷೇತ್ರಗಳಲ್ಲಿ ಉದ್ಯಮಶೀಲರಾಗಿ, ಅವರು, ಇಡೀ ಭಾರತದಲ್ಲಿಯೇ ವೈಚಾರಿಕ ಸಾಮರಸ್ಯವನ್ನು ಸಾಧಿಸಿದರು. ಜನರಲ್ಲಿಯ ಮತೀಯ ಹಟಮಾರಿತನವನ್ನು ಹೋಗಲಾಡಿಸಿ, ಪರಮಪಾವನವಾದ ವೇದಾಂತಮಂದಿರದ ಬಾಗಿಲುಗಳನ್ನು ಎಲ್ಲರಿಗೂ ತೆರೆದಿಟ್ಟರು. ಒಳಗೆ ಬರಲು ಒಲವುಳ್ಳವರನ್ನೆಲ್ಲ ಕರುಣೆ, ಪ್ರೀತಿಗಳಿಂದ ಬರಮಾಡಿಕೊಂಡರು. ದೇಶದ ನಾಲ್ಕೂ ಮೂಲೆಗಳಲ್ಲಿ ಮಠಗಳನ್ನು ಸ್ಥಾಪಿಸಿ, ತನ್ಮೂಲಕ ರಾಷ್ಟ್ರದ ಸಾಂಸ್ಕೃತಿಕ-ಒಗ್ಗಟ್ಟನ್ನು ಉತ್ತೇಜಿಸಿದರು; ಸಾಧಿಸಿದರು."

ಕೇವಲ ಮೂವತ್ತೆರಡು ವರ್ಷಗಳ ಅಲ್ಪಾಯುಷ್ಯದಲ್ಲಿ, ಅನೇಕ ದೀರ್ಘಾಯುಷಿಗಳು ಮಾಡಬಹುದಾದದ್ದಕ್ಕಿಂತಲೂ ಹೆಚ್ಚು ಸಾಧನೆಮಾಡಿ ತೋರಿದರು. ಅವರು ಭಾರತೀಯರ ಮೇಲೆ ಬೀರಿಹೋದ ಪ್ರಬಲತರ ಮನಸ್ಸಿನ ಪ್ರಭಾವ ಹಾಗೂ ವ್ಯಕ್ತಿಮತ್ತೆಯ ಮಹಿಮೆಗಳು ಇಂದಿಗೂ ಸ್ಪಷ್ಟವಾಗಿ ಗೋಚರಿಸುತ್ತಿವೆ.

----ಜವಾಹರಲಾಲ್ ನೆಹರು.

* * * * *

22. He established four great Maths or monasteries, locating them far from each other, almost at the four corners of India. One of these was in the south at Shringeri in Mysore, another at Puri on the east coast, the third at Dwaraka in Kathiawad on the west coast, and the fourth at Badarinath in the heart of the Himalayas. At the age of thirty two, Shankara, from the tropical south died at Kedarnath in the upper snow-covered reaches of the Himalayas.

By locating his four great monasteries in the north, south, east and west, he evidently wanted to encourage the conception of a culturally united India. These four places had been previously places of pilgrimage from all parts of the country, and now became more so. --..........[ Javaharlal Nehru-Discovery of India page 190]

22. ಶ್ರೀ ಶಂಕರಾಚಾರ್ಯರು, ದೇಶದ ನಾಲ್ಕು ಮೂಲೆಗಳಲ್ಲಿ ನಾಲ್ಕು ಆಮ್ನಾಯ ಮಠಗಳನ್ನು ಸ್ಥಾಪಿಸಿದರು. ಅವುಗಳಲ್ಲಿ ಒಂದು ದಕ್ಷಿಣದ ಶೃಂಗೇರಿಯಲ್ಲಿದೆ. ಮತ್ತೊಂದು ಜಗನ್ನಾಥ ಪುರಿಯಲ್ಲಿ, ಪೂರ್ವಕರಾವಳಿಯಲ್ಲಿದೆ. ಮೂರನೆಯದು ಕಾಠಿಯಾವಾಡದ ದ್ವಾರಕಾದಲ್ಲಿ ಪಶ್ಚಿಮಕರಾವಳಿಯಲ್ಲಿದೆ. ನಾಲ್ಕನೆಯದು, ಹಿಮಾಲಯದ ಹೃದಯ ದಲ್ಲಿ ಬದರೀನಾಥದಲ್ಲಿದೆ. ತಮ್ಮ ವಯಸ್ಸಿನ ಮೂವತ್ತೆರಡನೆಯ ವರ್ಷದಲ್ಲಿ, ದಕ್ಷಿಣಭಾರತದ ಉಷ್ಣವಲಯ ನಿವಾಸಿ ಶ್ರೀ ಶಂಕರರು, ಉತ್ತರಹಿಮಾಲಯದ ಹಿಮಾಚ್ಛಾದಿತ ಗಿರಿಶೃಂಗದ ಕೇದಾರನಾಥದಲ್ಲಿ ಬ್ರಹ್ಮೀಭೂತರಾದರು.

ದೇಶದ ನಾಲ್ಕೂ ಮೂಲೆಗಳಲ್ಲಿ ತಮ್ಮ ಮಠಗಳನ್ನು ಸ್ಥಾಪಿಸುವ ಮೂಲಕ, ದೇಶದ ಶಾಂಸ್ಕೃತಿಕ ಸಮಗ್ರತೆ ಯನ್ನು ಬಲಪಡಿಸಲು ಅವರು ಬಯಸಿದರು. ಈ ನಾಲ್ಕೂ ಸ್ಥಳಗಳು ಅವರು ಮಠಗಳನ್ನು ಸ್ಥಾಪಿಸುವ ಮೊದಲೇ ಯಾತ್ರಸ್ಥಳಗಳಾಗಿದ್ದವು. ಮಠಸ್ಥಾಪನೆಯಾದ ನಂತರವಂತೂ ಅವುಗಳ ಮಹತಿ, ಇನ್ನೂ ವರ್ಧಿಸಿತು.

-------.ಜವಾಹರಲಾಲ್ ನೆಹರೂ.....ಭಾರತಾನ್ವೇಷಣೆ ....ಪುಟ 190

* * * * *

23. "Shri Shankara was a great philosophr, a religious reformer, a poet, a critic and orator. Over and above all these, he was an unparalleled leader and a great statesman. He is the real unifier of India. [Foreword to "Adi Shankara The Survivor of Mankind".......Hon. Justice P.N.Bhagavti [Retd Justice, Hon.Supreme Court of India].

23.. "ಆಚಾರ್ಯ ಶ್ರೀಶಂಕರರು ಮಹಾನ್‌ತತ್ತ್ವಚಿಂತಕರೂ, ಧರ್ಮಸುಧಾರಕರೂ, ಶ್ರೇಷ್ಠಕವಿವರ್ಯರೂ, ವಿಮರ್ಶಕರೂ, ಅಪ್ರತಿಮ ವಾಗ್ಮಿಗಳೂ ಆಗಿದ್ದರು. ಇವೆಲ್ಲವುಗಳಿಗೂ ಕಳಶವಿಟ್ಟಂತೆ, ಅವರು ಒಬ್ಬ ಅನುಪಮ ಧುರೀಣರಾಗಿದ್ದರು; ಒಬ್ಬ ನಿಜವಾದ ತೀಕ್ಷ್ಣಮತಿಗಳಾದ ರಾಷ್ಟ್ರಕ [ರಾಜನೀತಿನಿಪುಣ]ರಾಗಿದ್ದರು. ನಿಜವಾದ ಅರ್ಥದಲ್ಲಿ ಅವರು ಭಾರತದ ಏಕೀಕರಣಸಾಧಕರಾಗಿದ್ದರು."

ಮಾನ್ಯ ಶ್ರೀ.ಪಿ.ಎನ್. ಭಗವತಿ–ಭಾರತದ ಸರ್ವೋಚ್ಚ ನ್ಯಾಯಾಲಯದ ಗೌರವಾನ್ವಿತ ನ್ಯಾಯಾಧೀಶರು.

* * * * *

24. "When the holy land of Bharata was sinking in the quagmire of non-Vedic sects, when the black monster of immorality, mal-practices and misbehaviour encircled Bharata on all the four sides, when from one end to the other end of the whole of the Bharata fell into the clutches of lethargy and indolence, then happened the auspicious arrival of Acharya Shankara in this country. When the flame of religiosity was at the brink of extinction in front of the dust-storm of vanity and was counting its final moments Acharya Shankara saved it from getting extinguished.......... In the whole world Shankara is completely identified with unity, integrity, and religiosity of this vast and great country Bharata and for us even today, the dignity of his profound scholarship and the importance of diligence is a great trust, a great achievement.

.........Baladev Upadhyaya. [Professor Benares Hindu University, and Sampurnanand Sanskrit University, Director Research Institute Varanasi, Eminent scholar.)

24 ಭಾರತವರ್ಷವು ಅವೈದಿಕ ಮತಗಳ ಕೆಸರಿನಲ್ಲಿ ಮುಳುಗುತ್ತಿದ್ದಾಗ, ಅನೀತಿ, ಭ್ರಷ್ಟಾಚಾರ, ದುರ್ನಡತೆಗಳೆಂಬ ದೈತ್ಯರು ಭಾರತವನ್ನು ನಾಲ್ಕೂ ಕಡೆಗಳಲ್ಲಿಯೂ ಸುತ್ತುವರಿದು ಕಾಡುತ್ತಿದ್ದಾಗ, ಈ ತುದಿಯಿಂದ ಆ ತುದಿಯ ವರೆಗೂ ಸಮಗ್ರ ಭಾರತವು ತಂದ್ರಾ, ಆಲಸ್ಯ, ಜಡತೆ, ಇತ್ಯಾದಿಗಳಲ್ಲಿ ಮುಳುಗಿಹೋದಾಗ, ಈ ಭೂಮಿಯ ಮೇಲೆ ಆಚಾರ್ಯ

ಶ್ರೀ ಶಂಕರರ ಪುಣ್ಯಾವತಾರವಾಯಿತು. ಧರ್ಮವೆಂಬ ನಂದಾದೀಪವು ವೃಥಾಭಿಮಾನವೆಂಬ ಮಾಯಾಮಯಧೂಳಿನ ಬಿರುಗಾಳಿಯಲ್ಲಿ, ನಂದಿಹೋಗಲು ಕ್ಷಣಗಳನ್ನು ಗಣಿಸುತ್ತಿರುವಾಗ, ಆಚಾರ್ಯ ಶ್ರೀ ಶಂಕರರು ಅದು ನಂದಿಹೋಗುವದನ್ನು ತಡೆದರು. ವಿಶಾಲವಾದ ಮತ್ತು ಘನವಾದ ಈ ಭಾರತದ ಏಕತೆ, ಸಮಗ್ರತೆ, ಮತ್ತು ಧಾರ್ಮಿಕತೆಗಳ ಪ್ರತಿನಿಧಿಗಳೆಂದೇ ಶ್ರೀ ಶಂಕರರು ಜಗತ್ತಿನಲ್ಲಿ ಪ್ರಸಿದ್ಧರಾಗಿದ್ದಾರೆ. ಆಳವಾದ ವಿದ್ವತ್ತು, ಅಗಾಧಪ್ರಜ್ಞೆ ಮತ್ತು ಕಾರ್ಯತತ್ಪರತೆ ಇವುಗಳಿಂದ ಅವರು ಅಸಾಧ್ಯವಾದುದನ್ನೇ ಸಾಧಿಸಿದರು."

---ಡಾ. ಬಲದೇವ ಉಪಾಧ್ಯಾಯರು-ಪ್ರಾಧ್ಯಾಪಕರು ವಾರಾಣಸಿಯ ಹಿಂದೂ ವಿಶ್ವವಿದ್ಯಾಲಯ ಹಾಗೂ ಡಾ. ಸಂಪೂರ್ಣಾನಂದ ವಿಶ್ವವಿದ್ಯಾಲಯ; ನಿರ್ದೇಶಕರು ಸಂಶೋಧನಾಸಂಸ್ಥೆ-ವಾರಾಣಸಿ.

* * * * *

25. Great credit is due to Shankara and his school, for having fought strenuously against the upholders of the self-existence of the material world and brought the whole universe under the sway of God, whom it owes not only its origination but also its very being. Shankara understood that the independent existence of another being would imply limitation of God.

..... Rev.J.F Pessein.....

25. "ಭೌತಿಕ ಜಗತ್ತಿನ ನಿರಪೇಕ್ಷ-ಅಸ್ತಿತ್ವವನ್ನು ಪ್ರತಿಪಾದಿಸುವ ಸಿದ್ಧಾಂತಗಳ ವಿರುದ್ಧ, ಆಚಾರ್ಯ ಶ್ರೀ ಶಂಕರರು, ಅತ್ಯಂತ ಕ್ಲೇಶಕರವಾದ ಮತ್ತು ಪ್ರಯಾಸಪೂರ್ಣವಾದ ಹೋರಾಟನಡೆಸಿದರು. ಹಾಗೂ ಇಡೀ ವಿಶ್ವವನ್ನೇ ಭಗವಂತನ ಅಧೀನಕ್ಕೆ ತಂದರು. ಜಗತ್ತು ತನ್ನ ಉದ್ಗಮಕ್ಕಷ್ಟೇ ಅಲ್ಲ, ಕೇವಲ ಅಸ್ತಿತ್ವ-ಮಾತ್ರಕ್ಕೂ ಕೂಡ ಭಗವಂತನನ್ನೇ ಅವಲಂಬಿಸಿದೆಯಲ್ಲವೇ? ಮತ್ತೊಂದು ವಸ್ತುವಿನ ನಿರಪೇಕ್ಷ ಅಸ್ತಿತ್ವವು ಭಗವಂತನ ಏಕಮೇವಾದ್ವಿತೀಯತ್ವಕ್ಕೆ ಭಂಗ ತರುವದೆಂಬ ನಿತಾಂತ ಸತ್ಯವನ್ನು ಶ್ರೀ ಶಂಕರು ಚೆನ್ನಾಗಿ ಅರಿತಿದ್ದರು."

---ರೆವರೆಂಡ್ ಜೆ.ಎಫ್. ಪೆಸೀನ್ ಪ್ರಸಿದ್ಧಪಾದ್ರಿಗಳು.

* * * * *

26. The only religion that can have any hold on the intellectual people is the rationalistic religion of Advaita.

......Romain Rolla- A French Thinker and a Philosopher.

26. "ವಿಶ್ವದ ಪ್ರಜ್ಞಾವಂತರ ಮೇಲೆ ಅತ್ಯಂತ ಗಾಢವಾದ ಪ್ರಭಾವವನ್ನು ಬೀರುವ, ಅವರೆಲ್ಲರನ್ನೂ ತನ್ನೆಡೆಗೆ ಸೆಳೆದಿಟ್ಟುಕೊಳ್ಳುವ ಒಂದೇ ಒಂದು ತತ್ತ್ವವೆಂದರೆ ಅದು ಅದ್ವೈತ ಮಾತ್ರ."...

ರೋಮೇ ರೋಲಾ ಫ್ರಾನ್ಸ-ದೇಶದ ತತ್ತ್ವಜ್ಞಾನಿಗಳು.

* * * * *

27. With Shankara we have to do with a philosopher of very different calibre. Infact, we have with one of the greatest of all philosophers, whose work ought to be better known in the occident than it is.....E.W.F.Tolman.

27. " ಶ್ರೇಷ್ಠಾತಿಶ್ರೇಷ್ಠ ತತ್ತ್ವವೇತ್ತರಲ್ಲಿ ಶ್ರೀ ಶಂಕರರು ಅಗ್ರಗಣ್ಯರಾದ್ದರಿಂದ ಅವರನ್ನು ಕುರಿತು ಮಾತನಾಡುವಾಗ ನಾವು ಒಬ್ಬ ಅನನ್ಯ-ಸಾಧಾರಣ ಸಾಮರ್ಥ್ಯವುಳ್ಳ ತತ್ತ್ವವೇತ್ತರ ವಿಷಯದಲ್ಲಿ ವ್ಯವಹರಿಸುತ್ತಿದ್ದೇವೆಂಬ ಪ್ರಜ್ಞೆ ಎಲ್ಲರಿಗೂ ಅವಶ್ಯವಾಗಿ ಬೇಕು. ಅವರ ಕೃತಿಗಳ ಪರಿಚಯವು ಪಾಶ್ಚಾತ್ಯ ದೇಶಗಳಲ್ಲಿ ಈಗ ಇದ್ದದ್ದಕ್ಕಿಂತಲೂ ಹೆಚ್ಚಾಗಿ ಆಗಬೇಕಾಗಿದೆ.'

———ಇ. ಡಬ್ಲ್ಯೂ ಎಫ್. ಟಾಲ್‌ಮನ್ –ಪಾಶ್ಚಾತ್ಯ ವಿದ್ವದಗ್ರೇಸರರು.

28. “A philosopher of the calibre of Shri Shankaracharya is yet to set his foot in this wide world.”

--Lokamanya Bal Gangadhar Tilak - Gita Rahasya page 77]

28. “ಆಚಾರ್ಯಪಾದ ಶ್ರೀ ಶಂಕರರಂಥ ಮಹಾಮಹಿಮಾನ್ವಿತ ಸತ್ತ್ವಪೂರಿತ ತತ್ತ್ವವೇತ್ತರು ಈ ವಿಶಾಲ ಜಗತ್ತಿನಲ್ಲಿನ್ನೂ ಕಾಲಿಟ್ಟಿಲ್ಲ.”

----ಲೋಕಮಾನ್ಯ ಬಾಲಗಂಗಾಧರ ತಿಲಕರು [ಗೀತಾರಹಸ್ಯ ಪುಟ 77].

* * * * *

29. “Rarely has such an all-round genius as Shankara walked on this earth in the cultural history of mankind. He was a master of the vast Vedic and Vedantic lore on the one hand, and a great custodian of our rich epic and Puranic legacy on the other. There was no system of philosophy or branch of technical science unfamiliar to him and no technique of the art of poetry or of debating of which he was not a skilled practitioner. Posterity has rightly been holding him in the highest regard, taking him as Lord Shiva himself in human form, as the greatest of the Gurus and all time Acharya”.

-- Dr.K. Krishnamoorthy from The Ship of Enlightenment page 77).

29. “ಆಚಾರ್ಯ ಶಂಕರರಂಥ ಸರ್ವತೋಮುಖ ಪ್ರತಿಭಾಸಂಪನ್ನರೂ, ಮೇಧಾವಿಗಳೂ, ಪ್ರಾಜ್ಞಮೌಲಿಗಳೂ, ಈ ಭೂಮಿಯ ಮೇಲೆ ಅವತರಿಸಿದ್ದು ಜಗತ್ತಿನ ಸಾಂಸ್ಕೃತಿಕ-ಇತಿಹಾಸದಲ್ಲೇ ಅತಿವಿರಳ. ಒಂದೆಡೆಗೆ, ಅವರು ಅಪೌರುಷೇಯಗಳಾದ ವೇದೋಪನಿಷತ್ತುಗಳ ವಿಸ್ತೃತವಾದ ಸಾಹಿತ್ಯದ ಪರಿಪೂರ್ಣ ಒಡೆತನವನ್ನು ಪಡೆದಿದ್ದರು. ಮತ್ತೊಂದೆಡೆಗೆ, ಭಾರತೀಯಸಾಂಸ್ಕೃತಿಕ ಆಸ್ತಿಯಾದ ಪುರಾಣಾದಿ ಆರ್ಷಸಾಹಿತ್ಯದ, ಸ್ವಯಂಪ್ರೇರಿತ ಅಭಿರಕ್ಷಕರಾಗಿದ್ದರು. ಅವರಿಗೆ ಅಪರಿಚಿತವಾದ ಅಧ್ಯಾತ್ಮ ಶಾಸ್ತ್ರದ ಯಾವುದೇ ಶಾಖೆಗಳಾಗಲಿ, ತಾಂತ್ರಿಕತೆಗಳಾಗಲಿ, ಇರಲಿಲ್ಲ. ಕಾವ್ಯಾದಿ ಶಾಸ್ತ್ರಗಳಲ್ಲಿಯೇ ಆಗಲಿ, ತತ್ತ್ವಶಾಸ್ತ್ರೀಯ ಶಾಸ್ತ್ರಾರ್ಥಗಳಲ್ಲಿಯೇ ಆಗಲಿ, ಅವರು ಅತ್ಯಂತ ನಿಷ್ಣಾತರಾಗಿದ್ದರು. ಉತ್ತರಕಾಲೀನ ಜಗತ್ತು ಅವರನ್ನು “ಗುರೂಣಾಂ ಗುರುಃ” ಎಂದೂ, “ಪೂಜ್ಯಾತ್ಪೂಜ್ಯತಮ ಆಚಾರ್ಯವರ್ಯ”ರೆಂದೂ, ಅಷ್ಟೇ ಏಕೆ ? “ಸಾಕ್ಷಾತ್ ಪರಶಿವನ ಅವತಾರವೇ” ಎಂದೂ ಗೌರವಿಸಿದ್ದು ಯಥಾರ್ಥವೇ ಆಗಿದೆ.’

-----ಡಾ. ಕೆ. ಕೃಷ್ಣಮೂರ್ತಿ.

* * * * *

30. “Shankara is the greatest of the philosophers, who towers above the rest of his kind in eminence; and at the same time he is also an inspired poet who spontaneously gives expression to his inmost experience of spiritual ecstasy in artistic language. Profundity and pellucidity, sublimity and spontaneity combine in his language in a unique blend.”

--Dr.K.Krishnamoorthy, “

30. “ಶ್ರೀಶಂಕರರು ಮಹಾನ್ ತತ್ತ್ವವೇತ್ತರು. ತತ್ತ್ವಶಾಸ್ತ್ರವೇತ್ತರಲ್ಲಿ ಗರಿಷ್ಠರು, ಉತ್ಕೃಷ್ಟತಮರು; ಉತ್‌ಸ್ಫೂರ್ತ ಕವಿಪುಂಗವರು. ತಮ್ಮ ಹೃದಯಾಂತರಾಳದಲ್ಲಿ ಅನುಭವಿಸಿದ ಆತ್ಮಾನಂದವನ್ನು ಕಲಾತ್ಮಕಭಾಷೆಯಲ್ಲಿ ಅಭಿವ್ಯಕ್ತಿಗೊಳಿಸಿದ್ದಾರೆ. ಗಾಂಭೀರ್ಯ, ನೈರ್ಮಲ್ಯ, ಸ್ಫೂರ್ತಿ, ಹಾಗೂ ಉದಾತ್ತತೆಗಳು ಅವರ ಸ್ತೋತ್ರಾದಿ ಕಾವ್ಯಪ್ರಕಾರಗಳಲ್ಲಿ ಅವಿವಿಕ್ತವಾಗಿ ಸೇರಿಹೋಗಿವೆ” -------ಡಾ. ಕೆ. ಕೃಷ್ಣಮೂರ್ತಿ-ಹೆಸರಾಂತ ವಿದ್ವಾಂಸರು.

31. "Shankara's system of Vedanta is unmatched for its metaphysical depth and logical coherence. The Advaita philosophy that he established firmly, is rightly described as one of the supreme achievements of Hinduism."

--Dr.S.S.Janaki from The Ship of Enlightenment p 87]

31. ಶ್ರೀ ಶಂಕರರ ಅದ್ವೈತವೇದಾಂತವು ಅದರ ಆಳವಾದ ಆಧ್ಯಾತ್ಮಿಕ ತತ್ತ್ವಗಳಿಂದ ಹಾಗೂ ಸುಸಂಗತ ತರ್ಕ-ಬದ್ಧತೆಯಿಂದ ಅಪ್ರತಿಮವಾಗಿದೆ. ಅವರು ಭದ್ರವಾಗಿ ಸ್ಥಾಪಿಸಿದ ಈ ತತ್ತ್ವಶಾಸ್ತ್ರವು ಹಿಂದೂಧರ್ಮದ ಉಚ್ಚತಮ ಸಾಧನೆಯಾಗಿದೆ ಎಂದು ಹೇಳಿದ್ದು ನ್ಯಾಯ ಸಮ್ಮತವೇ ಆಗಿದೆ.

----ಡಾ. ಎಸ್.ಎಸ್. ಜಾನಕಿ, ಚೆನ್ನೈ.

* * * * *

32. Take off The Shankara-Advaita and the vital breath of India would be taken away. In fact, Indian Philosophy would lose all its interest, if it is bereft of Shankara- Advaita.

--from page 344 of " A Survey of Post Shankara Advaita Vedanta by Sulochana. A. Nachane pub. By Eastern Book Links Delhi India……2000.

32. ಶ್ರೀ ಶಂಕರರ ಅದ್ವೈತವನ್ನು ತೆಗೆದು ಆಚೆ ಹಾಕಿದರೆ, ಭಾರತದ ಪ್ರಾಣವನ್ನೇ ಆಚೆ ತೆಗೆದು ಹಾಕಿದಂತೆ. ಶ್ರೀ ಶಂಕರರ ಅದ್ವೈತದ ವಿನಾ, ಭಾರತೀಯ ತತ್ತ್ವಶಾಸ್ತ್ರವು ತನ್ನೆಲ್ಲವನ್ನು ಕಳೆದುಕೊಳ್ಳುತ್ತದೆ.

---ಡಾ.ಸುಲೋಚನಾ ನಾಚನೆ.

* * * * *